ನಂಬಿಕೆ ಜಗದಂಬಿಕೆ

# ಗುರು

vishwavani.news

ಗುರುವಾರ 14.01.2021

ನಿನ್ನೊಳಗೆ ಜ್ಞಾನದ ಸಾಗರವೇ ಅಡಗಿದೆ. ನಿನ್ನ ಆತ್ಮವೇ ನಿನ್ನ ಗುರು.

- ಸಂತೋಷ ಕುಮಾರ್



ಈ ಕ್ಷಣದಲ್ಲಿ ನಿನ್ನ ಮುಂದಿರುವ ಸೌಂದರ್ಯ ನೋಡು. ಭವಿಷ್ಯವು ತನ್ನಿಂದ ತಾನೇ ರೂಪುಗೊಳ್ಳುತ್ತದೆ.

-ಸ್ವಾಮಿ ಯೋಗಾನಂದ

## ಅಮೃತ ವಾಹಿನಿ

# ಜೀವನ್ಮುಕ್ತಿಯ ಹೆಜ್ಜೆಗಳು



• ಬೇಲೂರು ರಾಮಮೂರ್ತಿ

ವಸಿಷ್ಠರು ಶ್ರೀ ರಾಮಚಂದ್ರನಿಗೆ ಉಪದೇಶಿಸಿದ 'ಯೋಗವಾಸಿಷ್ಠ'ದಲ್ಲಿ ನಮ್ಮ ದೇಹವನ್ನು ಒಂದು ನಗರಕ್ಕೆ ಹೋಲಿಸಿ ನಮ್ಮ ಆತ್ಮವನ್ನು ಅಲ್ಲಿ ವಿಹರಿಸುತ್ತಿರುವ ಒಂದು ಶಕ್ತಿ ಎಂದು ಕರೆದಿದ್ದಾರೆ. ಅದು ಹೇಗೆಂದರೆ

**ಯ ಉತ್ತಮ ಪದಾಲಂಬೀ ಚಕ್ರಭ್ರಮವದಾಸ್ಥಿತಃ**
**ಶರೀನಗರೀರಾಜ್ಯಂ ಕುರ್ವನ್ನಪಿ ನ ಲಿಪ್ಯತೇ**
**ತಸ್ಯೇಯಂ ಭೋಗಮೋಕ್ಷಾರ್ಥಂ ತಜ್ಞಸ್ಯೋಪವನೋಪಮಾ**
**ಸುಖಾಯೈವ ನ ದು:ಖಾಯ ಸ್ವಶರೀರಮಹಾಪುರೀ**

ನಮ್ಮ ಬದುಕಿನ ಚಕ್ರವನ್ನು ಇಲ್ಲಿ ಕುಂಬಾರನ ಮಣ್ಣು, ಅದನ್ನು ಸುತ್ತಿಸುವ ಚಕ್ರ ಮತ್ತು ಅದನ್ನು ಹದ ಮಾಡುವ ಕೋಲಿಗೆ ಹೋಲಿಸಿ ಶ್ರೀರಾಮನಿಗೆ ಹೀಗೆ ಹೇಳುತ್ತಾರೆ. ಅಯ್ಯಾ ರಾಮ, ಕುಂಬಾರನು ಘಟ, ಮಡಿಕೆ, ಕುಡಿಕೆ, ಮುಂತಾದ ಮೃಣ್ಮಯಗಳನ್ನು ತಯಾರಿಸಲು ಚಕ್ರವನ್ನು ಕೋಲಿನಿಂದ ಗಿರ್ರನೆ ಜೋರಾಗಿ ಸುತ್ತುವನು. ಘಟ ಮುಂತಾದ ವಸ್ತುಗಳು ತಯಾರಾದ ಮೇಲೆಯೂ ಕುಂಬಾರನು ತಿರುಗಿಸದೇ ಇದ್ದರೂ ಮೊದಲು ತಿರುಗಿಸಿದ ವೇಗದ ಚಲನಾ ಶಕ್ತಿ ಇರುವವರೆಗೂ ಚಕ್ರವು ತಿರುಗುತ್ತಲೇ ಇರುವುದು. ಎಲ್ಲಿಯವರೆವಿಗೂ ಎಂದರೆ ಚಲನೆಯ ಶಕ್ತಿ ಸಂಪೂರ್ಣವಾಗುವವರೆಗೂ. ಹಾಗೆಯೇ ಜೀವನ್ಮುಕ್ತನಾದ ಮನುಷ್ಯ ಪರಮಪದವನ್ನು ಸೇರಿದರೂ ಇನ್ನೂ ಅಲ್ಪಸ್ವಲ್ಪ ಉಳಿದಿರುವ ಪ್ರಾರಬ್ಧ ಕರ್ಮವು ಸವೆಯುವವರೆಗೂ ಈ ದೇಹ ವ್ಯಾಪಾರಗಳನ್ನು ಅನುಭವಿಸುತ್ತಲೇ ಇರುತ್ತಾನೆ. ಆದರೆ ಈ ವ್ಯಾಪಾರದಲ್ಲಿ ಅವನು ಅನಾಸಕ್ತ. ಸಂತರ್ಪಣೆ ಊಟಕ್ಕೆ ಕೂತವರು, ಊಟ ಬಡಿಸಿದ್ದು ಮುಗಿದ ಮೇಲೆ ಮತ್ತು ಹೊಟ್ಟೆ ತುಂಬಿದ ಮೇಲೂ ಪಂಕ್ತಿ ಬೇಧ ಮಾಡದೇ ಹಿರಿಯರು ಏಳುವವರೆಗೂ ಕೂತೇ ಇರುತ್ತಾರಲ್ಲ ಹಾಗೆ. ಅವನ ಈ ದೇಹವೆಂಬ ನಗರದಲ್ಲಿ ಅವನು ವಿಹರಿಸುತ್ತಿದ್ದಾನೆ. ಅವನಿಗೆ ಇಲ್ಲಿನ ಯಾವ ಕ್ರಿಯೆಯಲ್ಲಿಯೂ ಆಸಕ್ತಿ ಇಲ್ಲ. ಅವನು ಇಲ್ಲಿ ದೇಹಕ್ಕೆ ಅಧಿಪತಿ ಆದರೂ ಅವನಿಗೆ ಉಪವನದಂತೆ ಕ್ರೀಡೆ ವಿನೋದಗಳಿಗೆ ಮಾತ್ರ ಮೀಸಲಾಗಿರುವುದು. ಅಂತಹವರಿಗೆ ಈ ಶರೀರ ರಾಜ್ಯದಿಂದ ಸುಖ ಲಭಿಸುವುದೇ ಹೊರತು ಎಂದೆಂದಿಗೂ ದು:ಖ ಇರುವುದಿಲ್ಲ.



ಇದನ್ನು ನಮ್ಮ ದೈನಂದಿನ ಜೀವನಕ್ಕೆ ಹೋಲಿಸಿದರೆ, ಕೆಲವು ಕಛೇರಿಗಳಲ್ಲಿ ನೌಕರರು ತಮ್ಮ ತಮ್ಮ ಕೆಲಸ ಮುಗಿಸಿದ ಮೇಲೂ ಸಾಹೇಬರು ಹೋಗಿ ಅನ್ನುವವರೆಗೂ ಮನೆಗೆ ಹೋಗುವ ಹಾಗಿಲ್ಲ. ಹಾಗೆಯೇ ಜೀವನ್ಮುಕ್ತ ಅನಿಸಿಕೊಂಡವರು ತಮಗೇ ತಿಳಿಯದಂತೆ ಭಗವಂತನ ಆಣತಿಯಂತೆ ನಮ್ಮ ನಮ್ಮ ಉಳಿದಿರುವ ಕರ್ಮಗಳನ್ನು ಸವೆಸುವವರೆಗೂ ಇಲ್ಲಿಂದ ನಿರ್ಗಮಿಸುವ ಹಾಗಿಲ್ಲ.

## ಗೌರಮ್ಮನ ವಚನಗಳು



• ರತ್ನಾಮೂರ್ತಿ

ತನ್ನ ಮಗುವಿಗೆ ತನ್ನ ಪ್ರೀತಿ ಧಾರೆಯನೆರೆಯೆ
ಇನ್ನದೇನದು ಹೆಚ್ಚು ಮನ್ನಣೆಯದೇ । ತಬ್ಬಲಿಯ ।
ತನ್ನದೆಂಬುದು ಶ್ರೇಷ್ಠ - ಗೌರಮ್ಮ

ಪತನ ಎಲ್ಲೆಡೆಗಾಗೆ ದ್ವೇಷದಾಯುಧದಿಂದ
ಪ್ರೀತಿ ಸಿಂಚನದಿಂದ ನಂದನದ ಸೊಬಗು । ಚಿಕ್ಕ ಬಾಳಿದನು ।
ಪ್ರೀತಿಯಾಳ್ವಿಕೆಗೆ ಬಿಡು - ಗೌರಮ್ಮ

ಒಳಗೆ ಮಂಗಳ ವಾದ್ಯ ಬಂಗಾರ ಮೆರವಣಿಗೆ
ಕೆಳಗಾಚೆ ಹಪಹಪಿಸಿ ಕಾದ ಒಡಲು । ಉಂಡು ಚೆಲ್ಲಿ ।
ಉಳಿದ ಮೇಲಲ್ಲವೇ - ಗೌರಮ್ಮ

ಹುಟ್ಟುವುದು ಒಂದೆ ಪರಿ ಸತ್ತರೂ ಮಸಣದುರಿ
ಇಟ್ಟೊಳಗೆ ಕಳಿಸಿಲ್ಲ ಮುತ್ತು ರತ್ನ । ಸ್ಪರ್ಶಕ್ಕೆ ಹೇಸುವರ ।
ಮೆಟ್ಟನಿಂದಿಡಬೇಕು - ಗೌರಮ್ಮ

ಜಗದಾಗು ಹೋಗುಗಳ ಸುತ್ತಲಿನ ಸುದ್ದಿಗಳ
ತೆಗೆಯದಿಹ ಸೇರಿಸದ ನಿಷ್ಠೆಯವರೇ । ಊಟ ಸೊಂಪಿರಲು ।
ಮಿಗದೇ ಹಂಗಿನ ಋಣವು - ಗೌರಮ್ಮ

## ಪಂಜಾಬಿನ ಲೋಹ್ರಿ



ಸಂಕ್ರಾಂತಿಯ ಹಿಂದಿನ ದಿನ ಪಂಜಾಬ್ ಪ್ರಾಂತ್ಯದಲ್ಲಿ ಆಚರಿಸುವ ಲೋಹ್ರಿ ಹಬ್ಬವು ಚಳಿಗಾಲದ ಹಬ್ಬ. ಹಬ್ಬಕ್ಕೆ ಒಂದು ವಾರವಿರುವಾಗಲೇ ಮಕ್ಕಳು ಮನೆ ಮನೆಗೆ ಹೋಗಿ, ಆ ರಾತ್ರಿ ಉರಿಸಲಿರುವ ಬೆಂಕಿಗೆ ಅಗತ್ಯ ಎನಿಸುವ ಸೌದೆ ಮತ್ತು ಇತರ ವಸ್ತುಗಳನ್ನು ಸಂಗ್ರಹಿಸುತ್ತಾರೆ. ಕಬ್ಬು, ಬೆಲ್ಲಗಳನ್ನೂ ಸಂಗ್ರಹಿಸುತ್ತಾರೆ. ಬೆಂಕಿಯನ್ನು ಉರಿಸಿ, ಅದರ ಸುತ್ತಲೂ ಕುಳಿತು ಹಾಡು ಹೇಳುತ್ತಾ, ನರ್ತಿಸುತ್ತಾ, ಕಬ್ಬು ಬೆಲ್ಲವನ್ನು ಹಂಚು, ಹಬ್ಬ ಆಚರಿಸುತ್ತಾರೆ. ಇದು ಚಳಿಗಾಲವನ್ನು ಓಡಿಸುವ ಹಬ್ಬ ಎಂದೇ ಪ್ರಸಿದ್ಧ.

## ಗ್ರಂಥ ದರ್ಶನ

### ಆಲ್ ಅಬೌಟ್ ಹಿಂದು ಟೆಂಪಲ್ಸ್




ಸ್ವಾಮಿ ಹರ್ಷಾನಂದ ಅವರು ರಚಿಸಿರುವ ಈ ಪುಸ್ತಕವು ನಮ್ಮ ನಾಡಿನ ದೇಗುಲಗಳ ಪರಿಚಯ ಮಾಡಿಕೊಡುತ್ತದೆ. ಈ ಪುಸ್ತಕದ ವಿಶೇಷವೆಂದರೆ, ಸಾಮಾನ್ಯ ಜನರಿಗೆ ಮತ್ತು ದೇಗುಲಗಳ ಬಗ್ಗೆ ಆಳವಾದ ಜ್ಞಾನ ಇಲ್ಲದವರಿಗೆ, ಸರಳವಾಗಿ ದೇಗುಲಗಳ ಪ್ರಾಮುಖ್ಯತೆ, ಅವು ರೂಪುಗೊಂಡ ರೀತಿ, ನಮ್ಮ ಸಂಸ್ಕೃತಿಯಲ್ಲಿ ದೇಗುಲಗಳ ಸ್ಥಾನ ಮೊದಲಾದ ವಿವರಗಳನ್ನು ತಿಳಿಸುತ್ತದೆ. ಹೊಸದಾಗಿ ನಮ್ಮ ದೇಶದ ದೇಗುಲಗಳ ಪರಿಚಯ ಮಾಡಿಕೊಳ್ಳುವವರಿಗೂ ಈ ಪುಸ್ತಕ ಸಹಕಾರಿ.

# ವಿಶ್ವಕೋಶ ರಚಿಸಿದ ಸ್ವಾಮಿ ಹರ್ಷಾನಂದಜಿ



**ಚಿನ್ನದ ಪದಕದೊಂದಿಗೆ ಇಂಜನಿಯರಿಂಗ್ ಪದವಿ ಪಡೆದ ಸ್ವಾಮಿ ಹರ್ಷಾನಂದಜಿ, ಮನಸ್ಸು ಮಾಡಿದ್ದರೆ, ಉತ್ತಮ ವೇತನ ದೊರೆಯುವ ಸಂಸ್ಥೆಯಲ್ಲಿ ವೃತ್ತಿ ನಿರ್ವಹಿಸಬಹುದಿತ್ತು. ತಮ್ಮ ಪ್ರತಿಭೆಯ ಸಹಾಯದಿಂದ ಸರಕಾರ ಅಥವಾ ಖಾಸಗಿ ಸಂಸ್ಥೆಯ ಉನ್ನತ ಹುದ್ದೆಯನ್ನು ಅಲಂಕರಿಸಬಹುದಿತ್ತು. ಆದರೆ ಅಧ್ಯಾತ್ಮದ ತುಡಿತವು ಅವರನ್ನು ರಾಮಕೃಷ್ಣ ಮಠದ ಸಂಪರ್ಕಕ್ಕೆ ತಂದಿತು. ಹಿಂದೂ ಧರ್ಮದ ಕುರಿತು ಅವರು ಇಂಗ್ಲಿಷ್‌ನಲ್ಲಿ ರಚಿಸಿದ ವಿಶ್ವಕೋಶವು ಅವರ ಅಪಾರ ಪಾಂಡಿತ್ಯಕ್ಕೆ ಒಂದು ನಿದರ್ಶನ.**

• ಡಾ. ಆರೂಢಭಾರತೀ ಸ್ವಾಮೀಜಿ

ಬೆಂಗಳೂರು ಬಸವನಗುಡಿಯ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಹರ್ಷಾನಂದಜಿ ಮಹಾರಾಜ್ (91) ಅವರು ಮೊನ್ನೆ ಮಧ್ಯಾಹ್ನ 1.05 ಘಂಟೆಗೆ ಬ್ರಹ್ಮಲೀನರಾದರು. ರಾಮಕೃಷ್ಣ ಮಠ ಹಾಗೂ ಮಿಷನ್‌ನ ಹಿರಿಯ ಸಂನ್ಯಾಸಿಗಳಾಗಿದ್ದ ಅವರು ಕನ್ನಡ, ಸಂಸ್ಕೃತ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಪ್ರಭುತ್ವ ಹೊಂದಿದ್ದರು. ಬೆಂಗಳೂರು ಮೂಲದ ಸ್ವಾಮೀಜಿ ಚಿಕ್ಕಂದಿನಲ್ಲಿಯೇ ಸ್ವಾಮಿ ವಿವೇಕಾನಂದರ ವಿಚಾರಧಾರೆಗಳಿಗೆ ಮಾರುಹೋದರು.

ತಮ್ಮ ಹದಿನೈದನೇ ವಯಸ್ಸಿನಲ್ಲಿ ಬೆಂಗಳೂರಿನ ರಾಮಕೃಷ್ಣಾಶ್ರಮದ ಸಂಪರ್ಕ ಹೊಂದಿ, ಸ್ವಾಮಿ ವಿರಜಾನಂದರಿಂದ ಮಂತ್ರದೀಕ್ಷೆಯನ್ನು ಪಡೆದರು. ಚಿನ್ನದ ಪದಕಗಳೊಂದಿಗೆ ಮೆಕಾನಿಕಲ್ ಇಂಜನಿಯರ್ ಪದವಿ ಗಳಿಸಿ, 1954 ರಲ್ಲಿ ಬೆಂಗಳೂರಿನ ರಾಮಕೃಷ್ಣಾಶ್ರಮವನ್ನು ಸೇರಿದರು. 1962 ರಲ್ಲಿ 31 ನೇ ವಯಸ್ಸಿನಲ್ಲಿ ಸ್ವಾಮಿ ವಿಶುದ್ಧಾನಂದರಿಂದ ಸಂನ್ಯಾಸದೀಕ್ಷೆ ಪಡೆದರು. ಮಂಗಳೂರು, ಮೈಸೂರು, ಅಲಹಾಬಾದ್‌ನ ರಾಮಕೃಷ್ಣ ಮಠಗಳಲ್ಲಿ ಸೇವೆ ಸಲ್ಲಿಸಿದರು. ಕೋಲ್ಕತ್ತಾ ಬಳಿಯ ರಾಮಕೃಷ್ಣ ಮಠದ ಬ್ರಹ್ಮಚಾರಿಗಳಿಗೆ ನೀಡುವ ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಶಿಕ್ಷಣ ತರಬೇತಿ ಕೇಂದ್ರದ ಆಚಾರ್ಯರಾಗಿ ಸೇವೆ ಸಲ್ಲಿಸಿದರು. ಬಳಿಕ, 1989ರಲ್ಲಿ ಬೆಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರಾಗಿ ನೇಮಕಗೊಂಡು 31 ವರ್ಷಗಳ ನಿರಂತರ ಸೇವೆ ಸಲ್ಲಿಸಿ ಮಠದ ಕೀರ್ತಿಯನ್ನು ಅಂತಾರಾಷ್ಟ್ರಮಟ್ಟದಲ್ಲಿ ಬೆಳಗಿದರು.

### ವಿಶ್ವಕೋಶ ರಚನೆ

ಸ್ವಾಮಿ ಹರ್ಷಾನಂದರಿಗೆ ಬರವಣಿಗೆ ಎಂದರೆ ಎಲ್ಲಿಲ್ಲದ ಉತ್ಸಾಹ, ಪ್ರೀತಿ. ಇಂದಿನ ಜನರಿಗೆ ನಮ್ಮ ನಾಡಿನ ಸಂಸ್ಕೃತಿ ಮತ್ತು ಅಧ್ಯಾತ್ಮ ಪರಂಪರೆಯನ್ನು ಪರಿಚಯಿಸುವ ಹಲವು ಗ್ರಂಥಗಳನ್ನು ಅವರು ರಚಿಸಿದ್ದಾರೆ. ಅವುಗಳಲ್ಲಿ ಮೇರು ಕೃತಿ ಎಂದರೆ 'ಎ ಕಾನ್ಸೈಸ್ ಎನ್ ಸೈಕ್ಲೊಪಿಡಿಯಾ ಆಫ್ ಹಿಂದೂಯಿಸಂ'. ಹಿಂದು ಧರ್ಮದ ಕುರಿತು ವಿಶ್ವಕೋಶದ ಸ್ವರೂಪ ಹೊಂದಿರುವ ಈ ಗ್ರಂಥವು ಮೂರು ಸಂಪುಟಗಳಲ್ಲಿ ಪ್ರಕಟಗೊಂಡಿದೆ. ಇದನ್ನು ಅವರು ರಚಿಸಲು ಆರಂಭಿಸಿದ್ದು 1975ರಲ್ಲಿ. ಸುಮಾರು 2500 ಪುಟಗಳಿರುವ ಈ ಸಂಪುಟಗಳಲ್ಲಿ 3708 ವಿಷಯಗಳ ಕುರಿತು ವಿವರಗಳು ಇವೆ. 1975ರಲ್ಲಿ ಬರವಣಿಗೆ ಆರಂಭಗೊಂಡು 2008 ರಲ್ಲಿ ಬಿಡುಗಡೆಯಾದ ಈ ಮೂರು ಸಂಪುಟಗಳು ನಮ್ಮ ನಾಡಿನ ಅಪೂರ್ವ ಗ್ರಂಥಗಳ ಸಾಲಿಗೆ ಸೇರಿವೆ. ತಮ್ಮ ಇಳಿಗಾಲದ ತನಕವೂ ಅವರು ಗ್ರಂಥ ರಚನೆ ಮುಂದುವರಿಸಿದ್ದರು. ಇದೇ ಜನವರಿ ಒಂದರಂದು 'ಮೈನರ್ ಗೀತಾಸ್' ಎಂಬ ಪುಸ್ತಕ ಬಿಡುಗಡೆಯಾಗಿತ್ತು. ಸ್ವಾಮಿ ಹರ್ಷಾನಂದರು ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತಗಳಲ್ಲಿ ಹಲವು ಗ್ರಂಥ ರಚಿಸಿದ್ದಾರೆ.




### ವಾಗ್ಮಿ

ಕರ್ನಾಟಕ ಹಾಗೂ ಹಿಂದುಸ್ಥಾನಿ ಸಂಗೀತಜ್ಞರಾಗಿದ್ದ ಶ್ರೀಗಳು ಸುಶ್ರಾವ್ಯವಾಗಿ ಹಾಡುತ್ತಿದ್ದುದು ನಿಜಕ್ಕೂ ವಿಶೇಷ. ಪ್ರೌಢ ವಿದ್ವಾಂಸರೂ, ಉತ್ತಮ ವಾಗ್ಮಿಗಳೂ ಆಗಿದ್ದ ಇವರು ನಮ್ಮ ಪರಂಪರೆಯ ಕುರಿತು ಆಳವಾದ ಜ್ಞಾನವನ್ನು ಹೊಂದಿದ್ದರು ಮತ್ತು ಅವರು ನೀಡುತ್ತಿದ್ದ ಕನ್ನಡ ಮತ್ತು ಆಂಗ್ಲ ಭಾಷೆಯ ವಿದ್ವತ್ಪೂರ್ಣ ಉಪನ್ಯಾಸಗಳು ಕೇಳುಗರ ಮನಸೂರೆಗೊಳ್ಳುತ್ತಿದ್ದವು.




### ಕಲಾಂ ಬಿಡುಗಡೆ ಮಾಡಿದ ವಿಶ್ವಕೋಶ

ಶ್ರೇಷ್ಠ ಬರಹಗಾರರಾಗಿದ್ದ ಶ್ರೀಗಳು ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ನೂರಾರು ಕೃತಿಗಳನ್ನು ರಚಿಸಿದ್ದಾರೆ. ಹಿಂದುಧರ್ಮದ ಸಮಗ್ರ ಮಾಹಿತಿ ನೀಡುವ 'ಎ ಕಾನ್ಸೈಸ್ ಎನ್‌ಸೈಕ್ಲೊಪಿಡಿಯಾ ಆಫ್ ಹಿಂದುಯಿಸಂ' (ಹಿಂದು ವಿಶ್ವಕೋಶ) ಮೂರು ಸಂಪುಟಗಳ ಮೇರು ಕೃತಿ, ಶ್ರೀಗಳ 30 ವರ್ಷಗಳ ಜ್ಞಾನ ತಪಸ್ಸಿನ ಫಲ! 2008 ರಲ್ಲಿ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಈ ಕೃತಿಯನ್ನು ವಿಶ್ವಾರ್ಪಣ ಮಾಡಿದರು. ವ್ಯಾಸರ ಬ್ರಹ್ಮಸೂತ್ರಗಳಿಗೆ ಬರೆದ ವಿವೇಕ ಸೌರಭ ಸಂಸ್ಕೃತ ವ್ಯಾಖ್ಯೆ, ವಿವೇಕಾನಂದ ಕರ್ಮಯೋಗ ಸೂತ್ರ ಶತಕ ಸಂಸ್ಕೃತದ ಸ್ವತಂತ್ರ ಕೃತಿ, ಇವರಿಗಿದ್ದ ಆಳವಾದ ಸಂಸ್ಕೃತ ವಿದ್ವತ್ತನ್ನು ಪರಿಚಯಿಸುತ್ತವೆ. ಪ್ರಶ್ನೋತ್ತರ ರೂಪದಲ್ಲಿ ಹಿಂದು ಧರ್ಮ, ಯುವಜನ ಶಕ್ತಿ ಜಾಗೃತವಾಗಲಿ, ಬ್ರಹ್ಮಚರ್ಯಜೀವನ ಮೊದಲಾದ ಕೃತಿಗಳು ಜನಜನಿತ. ಇವರ ಹಲವಾರು ಕೃತಿಗಳು ವಿದೇಶೀ ಭಾಷೆಗಳಲ್ಲಿ ಅನುವಾದಗೊಂಡಿವೆ.

ಇವರ ಅನೇಕ ಮೌಲಿಕ ಕೃತಿಗಳನ್ನು ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದೆ. ದೂರದರ್ಶನದಲ್ಲಿ ಅನೇಕ ಉಪನ್ಯಾಸ ನೀಡಿದ ಶ್ರೀಗಳು ಅಂಕಣಕಾರರಾಗಿ ಭಗವದ್ಗೀತೆಯ ಮೇಲೆ ಕನ್ನಡ ದಿನಪತ್ರಿಕೆಯಲ್ಲಿ ಸರಣಿ ಲೇಖನಗಳನ್ನು ಪ್ರಕಟಿಸಿದ್ದಾರೆ. ನಾರದ ಭಕ್ತಿಸೂತ್ರಗಳಿಗೆ ಕನ್ನಡದಲ್ಲಿ ಭಕ್ತಿ ಕೌಮುದೀ ವ್ಯಾಖ್ಯೆ ರಚಿಸಿ ಡಾ. ಎಂ. ಈ. ರಂಗಾಚಾರ್ಯರಿಂದ ಸಂಸ್ಕೃತಕ್ಕೆ ಅನುವಾದಿಸಿದ್ದಾರೆ. ತಮ್ಮ ಸಂಸ್ಕೃತದ ವಿವೇಕಾನಂದ ಕರ್ಮಯೋಗ ಸೂತ್ರ ಶತಕವನ್ನು ಹಾಗೂ ಸಂಸ್ಕೃತದ ಶ್ರೀರಾಮಕೃಷ್ಣ ಭಾಗವತವನ್ನು ಡಾ. ಆರೂಢ ಭಾರತೀ ಸ್ವಾಮಿಯಾದ ನನ್ನಿಂದ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ.

### ಇನ್ನೂ ಕಲಿಕೆಯ ತುಡಿತ

ಅವರಿಗೆ ಆಳವಾದ ವಿದ್ವತ್ತಿದ್ದರೂ, ಇನ್ನಷ್ಟು ಕಲಿಯುವ ತುಡಿತ. ಈ ಇಳಿವಯಸ್ಸಿನಲ್ಲೂ, ಎರಡು ವರ್ಷಗಳ ಹಿಂದೆ ಕೆಲವು ದಿನ ನನ್ನಿಂದ ಪಾಣಿನಿಯ ಸಂಸ್ಕೃತ ವ್ಯಾಕರಣ ಕೇಳಿಸಿಕೊಂಡರು. ಇದು ಅವರ ವಿದ್ಯಾಪ್ರೀತಿಯ ಹಿರಿಮೆ ಗರಿಮೆಗೆ ಸಾಕ್ಷಿ. ಅವರ ಅಗಲಿಕೆ ಭಾರತೀಯ ಧಾರ್ಮಿಕ ಆಧ್ಯಾತ್ಮಿಕ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರಕ್ಕೆ, ಭರಿಸಲಾಗದ ನಷ್ಟ. ಅವರ ಆದರ್ಶ ಉತ್ಸಾಹ ಪ್ರೀತಿ ಕರುಣೆ ಅನುಕಂಪ ತಾಳ್ಮೆ ತ್ಯಾಗ ಶಿಸ್ತು ಕಷ್ಟಸಹಿಷ್ಣುತೆ ಅಪಾರ ವಿದ್ವತ್ತು, ಇನ್ನು ನೆನಪು ಮಾತ್ರ. ಸಾಹಿತ್ಯರೂಪದಲ್ಲಿ ಅವರು ಎಂದೆಂದಿಗೂ ಅಜರಾಮರ!

### ಸ್ವಾಮಿ ಹರ್ಷಾನಂದ ರಚಿಸಿದ ಕೆಲವು ಕೃತಿಗಳು

- ಮಹರ್ಷಿ ಪತಂಜಲಿಯ ಯೋಗಸೂತ್ರಗಳು
- ಹಿಂದೂ ಹಬ್ಬಗಳು ಮತ್ತು ಉತ್ಸವಗಳು
- ದ ಸಿಕ್ಸ್ ಸಿಸ್ಟಂಸ್ ಆಫ್ ಹಿಂದು ಫಿಲಾಸಫಿ
- ಶಾಂಡಿಲ್ಯ ಭಕ್ತಿ ಸೂತ್ರಾಸ್
- ಹಿಂದು ಫೆಸ್ಟಿವಲ್ಸ್ ಅಂಡ್ ಸೇಕ್ರೆಡ್ ಡೇಸ್
- ಹಿಂದು ಗಾಡ್ ಅಂಡ್ ಗಾಡೆಸಸ್
- ದ ಟೆನ್ ಕಾರ್ಡಿನಲ್ ಉಪನಿಷತ್ಸ್
- ಎ ಕಾನ್ಸೈಸ್ ಎನ್‌ಸೈಕ್ಲೊಪಿಡಿಯಾ ಆಫ್ ಹಿಂದುಯಿಸಂ
- ಹಿಂದೂಯಿಸಂ ತ್ರೂ ಕ್ವೆಶ್ಚನ್ಸ್ ಅಂಡ್ ಆನ್ಸರ್ಸ್
- ದ ವಂಡರ್ ದಟ್ ವಾಸ್ ಶಾರದಾ ದೇವಿ
- ಶಾರದಾ ದೇವಿ : ದ ಗ್ರೇಟ್ ವಂಡರ್
- ತ್ರೀ ಸಿಸ್ಟಂಸ್ ಆಫ್ ವೇದಾಂತ : ಅನ್ ಇಂಟ್ರೊಡಕ್ಷನ್
- ಸಮ್ ಸೆಲೆಕ್ಷನ್ಸ್ ಫ್ರಂ ದ ಸ್ಕ್ರಿಪ್ಚರ್ಸ್ ಆಫ್ ದ ವರ್ಲ್ಡ್ ರಿಲಿಜನ್ಸ್
- ತ್ರೀ ಜ್ಯುವೆಲ್ಸ್ ಆಫ್ ವೇದಾಂತ
- ಹಿಂದು ಪಿಲ್ಗ್ರಿಮ್ ಸೆಂಟರ್ಸ್
- ಶ್ರೀ ರಾಮಕೃಷ್ಣ ಉಪನಿಷತ್
- ಸ್ವಾಮಿ ಬ್ರಹ್ಮಾನಂದ ಇನ್ ಪಿಕ್ಚರ್ಸ್
- ನಾರದ ಭಕ್ತಿ ಸೂತ್ರಂ (ಸಂಸ್ಕೃತದಲ್ಲಿ)
- ಪುರುಷಸೂಕ್ತ (ಸಂಸ್ಕೃತ)

# ಕನಸುಗಳನ್ನು ಕಾಣಲೇಬೇಕು

• ಮಹಾದೇವ ಬಸರಕೋಡ

ಕನಸುಗಳು ಬದುಕಿನ ಅವಿಭಾಜ್ಯತೆಯಾಗಿ ಮಾನವನ ಹುಟ್ಟಿನಿಂದಲೂ ಜೊತೆಯಾಗಿ ಸಾಗಿ ಬರುವುದರ ಜತೆಗೆ ಬದುಕನ್ನು ಚಲನಶೀಲಗೊಳಿಸಿ ಅದರ ಚೆಲುವು ಹೆಚ್ಚಿಸುವಲ್ಲಿ ತುಂಬಾ ಸಹಕಾರಿಯಾಗಿವೆ. ಮನುಷ್ಯನ ಕನಸುಗಳಿಗೆ ಅವನ ಬದುಕಿನಷ್ಟೇ ದೀರ್ಘವಾದ ಪರಂಪರೆ ಇದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಕನಸುಗಳು ಬದುಕಿನ ಅಮೂರ್ತ ರೂಪ. ಕನಸುಗಳಿರದ ಬಾಳು ನೆರಳಿರದ ದಾರಿಯಂತೆ, ಪರಿಮಳವಿರದ ಸುಮದಂತೆ, ಸಿಹಿ ಇರದ ಕಬ್ಬಿನಂತೆ. ಕನಸುಗಳೆಲ್ಲವೂ ನಿಜವಾಗಬೇಕೆಂಬ ಯಾವ ನಿಯಮವಿಲ್ಲದಿದ್ದರೂ ಅವುಗಳನ್ನು ಹೆಣೆಯುವದರಲ್ಲಿಯೂ ಒಂದು ಸಂಭ್ರಮವಿದೆ, ಸಂತಸವಿದೆ, ಸುಖದ ಅನುಭೂತಿಯಿದೆ. ನಿತ್ಯದ ಜೀವನದಲ್ಲಿ ಕೊರತೆ, ಬಡತನ ಅನುಭವಿಸುವ, ಅತೃಪ್ತವಾಗಿರುವ, ನಿರಾಸೆಯಿಂದ ಬಳಲುವ ಅನೇಕರಿಗೆ ಕನಸು ಕೊಂಚ ಕಾಲವಾದರೂ ನೆಮ್ಮದಿಯನ್ನು ನೀಡಬಲ್ಲದು. ಅಂತೆಯ ಕನಸುಗಳು ನನಸಾಗದಿದ್ದರೂ ಅವುಗಳಿಗೆ ಅವುಗಳದೇ ಆದ ಘನತೆಯಿದೆ. ಅಂತೆಯೆ ನಾವೂ ದಿನ ದಿನವೂ ಹೊಸ ಕನಸುಗಳನ್ನು ಹೊಸೆಯಬೇಕು. ಬದುಕನ್ನು ಮತ್ತಷ್ಟು ಚಲನಶೀಲಗೊಳಿಸಬೇಕು.

ಶೆರ್ಪಾ ಜನಾಂಗಕ್ಕೆ ಸೇರಿದ ತೇನಸಿಂಗ್‌ಗೆ ಆಗಿನ್ನೂ ಸುಮಾರು ಹತ್ತು ವರ್ಷದ ಪ್ರಾಯ. ನಿತ್ಯವೂ ಮನೆಯಲ್ಲಿ ಸಾಕಿದ ಮೇಕೆಗಳನ್ನು ಮೇಯಿಸಿಕೊಂಡು ಬರಲು ಹಿಮಾಲಯದ ಪರ್ವತದ ತಪ್ಪಲಿಗೆ ಹೋಗುತ್ತಿದ್ದ. ಪ್ರತಿ ದಿನ ತಾಯಿ ಪರ್ವತದ ತಪ್ಪಲಿನವರೆಗೂ ಬಂದು ಕಳುಹಿಸಿ ಹೋಗುತ್ತಿದ್ದಳು. ಹಾಗೆ ಹೋಗುವಾಗ ಅಲ್ಲಿನ ಪರ್ವತಾರೋಹಿಗಳನ್ನು ತೋರಿಸುತ್ತಾ 'ಮಗೂ ನಿರಂತರವಾಗಿ ಹಲವಾರೂ ವರ್ಷಗಳಿಂದ ಬೃಹತ್ ಹಿಮಾಲಯ ಪರ್ವತವನ್ನು ಏರಲು ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ ಇಲ್ಲಿಯವರೆಗೂ ಯಾರೊಬ್ಬರೂ ಕೂಡಾ ಸಫಲವಾಗಿಲ್ಲ. ನೀನು ಈ ಪರ್ವತವನ್ನು ಏರಬಲ್ಲೆಯಾ?' ಎಂದು ಕೇಳುತ್ತಿದ್ದಳು. ತಾಯಿಯ ಇಂತಹ ವಾತ್ಸಲ್ಯ, ಪ್ರೀತಿ ತುಂಬಿದ ಮಾತು ಅವನ ಎದೆಯಾಳದಲ್ಲಿ ಹೊಸ ಕನಸಿನ ಬೀಜ ಬಿತ್ತಿತು. ಅಂದಿನಿಂದ ಅದು ಮೊಳಕೆಯೊಡೆಯಲು ಪ್ರಾರಂಭಿಸಿತ್ತು. ಅವನನ್ನು ಅವತ್ತಿನಿಂದಲೇ ಮಾನಸಿಕವಾಗಿ ಸಿದ್ಧಗೊಳಿಸುವಲ್ಲಿ ಸಫಲವಾಗಿತ್ತು. ನಲವತ್ತನೇ ವಯಸ್ಸಿನಲ್ಲಿ ಹಿಮಾಲಯ ಪರ್ವತವೇರುವ ಕನಸು ನನಸಾಗಿತ್ತು. ವಿಶ್ವದ ಅತಿ ಎತ್ತರದ ಶಿಖರ ಎವರೆಸ್ಟ್‌ನ್ನು ಏರಿ, ವಿಶ್ವದಾಖಲೆ ಮಾಡಿದನು. ಅವನೊಬ್ಬ ಯಶಸ್ವಿ ಶಿಖರಗಾಮಿಯಾಗಿದ್ದ. ಆಗ ಅವನಿಗೆ ನಲವತ್ತರ ಪ್ರಾಯ. ಅಂದು ಅವನ ಯಶಸ್ಸಿನ ಹಿನ್ನೆಲೆ ಪತ್ರಕರ್ತರೊಬ್ಬರು ಕೇಳಿದಾಗ, 'ನಾನು ನನ್ನ ಹತ್ತನೆ ವಯಸ್ಸಿನಿಂದಲೆ ಮಾನಸಿಕವಾಗಿ ಪರ್ವತವೇರಲು ಪ್ರಾರಂಭಿಸಿದ್ದೆ. ದೈಹಿಕವಾದ ಸಾಫಲ್ಯ ಮಾತ್ರ ಈಗ ಲಭಿಸಿದೆ' ಎಂಬ ಅವನ ಪ್ರಾಮಾಣಿಕ ಉತ್ತರ ಕನಸಿನ ಘನತೆಯನ್ನು ಮತ್ತೆ ಮತ್ತೆ ಸಾರಿ ಹೇಳುತ್ತದೆ.

ಕನಸುಗಳು ನಮ್ಮ ಬದುಕಿಗೆ ನಿರ್ದಿಷ್ಟ ಚೌಕಟ್ಟನ್ನು ಒದಗಿಸುವಲ್ಲಿ, ತುಂಬಾ ಅವಶ್ಯಕವಾದ ಮತ್ತು ಗಣನೀಯವಾದ ವಿಷಯಗಳ ಕಡೆ ನಮ್ಮ ಮನಸ್ಸನ್ನು ಗಮನ ಹರಿಸುವಲ್ಲಿ ಪೂರಕವಾಗಬಲ್ಲವು. ನಮ್ಮ ಗುರಿಗಳನ್ನು ಸಾಧಿಸುವ ಚಟುವಟಿಗಳಲ್ಲಿ ಮಾತ್ರ ನಮ್ಮ ಮನಸ್ಸು, ಶ್ರಮ, ಶಕ್ತಿಯನ್ನು ಕೇಂದ್ರಿಕರಿಸಲು, ತನ್ಮೂಲಕ ಆತ್ಮ ನಿಯಂತ್ರಣಕ್ಕೆ ರಹದಾರಿ ಒದಗಿಸಬಲ್ಲವು. ನಮ್ಮ ಬದುಕನ್ನು ಸಾಫಲ್ಯದತ್ತ ಕೊಂಡೊಯ್ಯಲು ಅಗತ್ಯವಾದ ಏಕಾಗ್ರತೆ ರೂಪಿಸಿಕೊಳ್ಳುವ ದಿಸೆಯಲ್ಲಿ, ಯೋಗ್ಯವಾದ ವಿಷಯಗಳಲ್ಲಿ ಮಾತ್ರ ನಮ್ಮ ಆತ್ಮ ನಿಯಂತ್ರಣ ಕೇಂದ್ರಿಕರಿಸಿಕೊಳ್ಳಲು ಸಹಾಯಕಾರಿಯಾಗಬಲ್ಲವು. ಮಾಂಟೈನ್ ಹೇಳಿದಂತೆ ಮನುಷ್ಯರ ಶ್ರೇಷ್ಠ ಮತ್ತು ಭವ್ಯ ಕಲೆಯೆಂದರೆ ಅಂದುಕೊಂಡಂತೆ ಬದುಕುವುದು. ಕನಸುಗಳು ಒಂದಿನಿತಾದರೂ ಇಂತಹ ಬದುಕನ್ನು ಕಟ್ಟಿಕೊಳ್ಳುವಲ್ಲಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ಸಾಂಧರ್ಬಿಕವಾಗಿ ಬದಲಾವಣೆಗೆ ಒಳಗಾಗದೆ ನಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳಲು, ಸಾಮಾಜಿಕ ಒತ್ತಡಗಳ ರಭಸಕ್ಕೆ ತಲೆಬಾಗದೆ ಗಟ್ಟಿಯಾಗಿ ತಲೆ ಎತ್ತಿ ನಿಲ್ಲುವ ಸಾಮರ್ಥ್ಯವನ್ನು ಬೆಳೆಸುತ್ತವೆ. ಹೃದಯದ ಪಿಸುಮಾತಿಗೆ ಕಿವಿಗೊಡಲು, ಎದೆಯಾಳದ ನಿಲುವುಗಳಿಗೆ ದನಿಯಾಗಲು ಕನಸುಗಳು ತುಂಬಾ ಅವಶ್ಯಕವಾಗಿವೆ. ಒಳ್ಳೆಯ ಕನಸುಗಳನ್ನು ಒಟ್ಟುಗೂಡಿಸಿ ಮುಂದೆ ಸಾಗುವದರಿಂದ ನಮ್ಮ ಯೋಚನಾ ಲಹರಿ ಸಕಾರಾತ್ಮಕ ಸಂಗತಿಗಳತ್ತ ಸಾಗುತ್ತದೆ. ಕುವೆಂಪು ಹೇಳುವಂತೆ ನಮ್ಮ ಇಂದಿನ ಕನಸು, ನಿಮ್ಮ ನಾಳೆಯ ಮನಸು ಕನಸುಗಳನ್ನು ಹೊಸೆಯದಿದ್ದರೆ ನಾವು ನಮ್ಮ ಸಾಮರ್ಥ್ಯಕ್ಕೆ ನಾವೇ ಪರಿಮಿತಿ ಹಾಕಿಕೊಂಡಂತಾಗುತ್ತದೆ.

# ಸಂಕ್ರಾಂತಿ ಸಂಭ್ರಮ

**ಚಳಿಯ ದಿನಗಳು ಕೊನೆಯಾಗುತ್ತಿವೆ ಎಂದು ಸಾರಲು ಬಂದಿರುವ ಸಂಕ್ರಾಂತಿ ಹಬ್ಬವು ಮನೆ ಮನಗಳಲ್ಲಿ ಸಂತಸ ತುಂಬುವ ಹಬ್ಬ. ಎಳ್ಳು ಬೆಲ್ಲಗಳನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ, ಸ್ನೇಹವನ್ನು, ವಿಶ್ವಾಸವನ್ನು, ಬಾಂಧವ್ಯವನ್ನು ಬೆಳೆಸಿಕೊಳ್ಳಲು ಉತ್ತೇಜಿಸುವ ಹಬ್ಬವಿದು. ಎಲ್ಲರಿಗೂ ಸಂಕ್ರಾಂತಿಯ ಶುಭಾಶಯಗಳು.**

• ಶಶಾಂಕ್ ಮುದೂರಿ

ನಮ್ಮ ನಾಡಿನ ಬಹು ದೊಡ್ಡ ಹಬ್ಬಗಳಲ್ಲಿ ಒಂದಾದ ಸಂಕ್ರಾಂತಿ ಇಂದು ಆಚರಣೆಗೊಳ್ಳುತ್ತಿದೆ. ವರ್ಷದ ಸಂಕ್ರಮಣ ಕಾಲ ಇದು. ಋತುಮಾನದಲ್ಲಿ ಮಹತ್ತರ ಬದಲಾವಣೆಯಾಗುವ ಸಮಯ. ಜನಮಾನಸದಲ್ಲಿ ಉತ್ಸಾಹ ಹೊಮ್ಮುವ ಕಾಲವಿದು. ಚಳಿಯ ದಿನಗಳು ಕಳೆದು, ಬೆಚ್ಚನೆಯ ಬೇಸಿಗೆಯು ದಿನಚರಿಯನ್ನು ಬೆಳಗುವ ಕಾಲವಿದು. ಚಳಿಯ ಮಂಜು ಮುಸುಕಿನಲ್ಲಿ ಸಂಚರಿಸುತ್ತಿದ್ದ ಸೂರ್ಯನ ರಥವು, ಪ್ರಖರ ಕಿರಣಗಳನ್ನು ಬೀರುತ್ತಾ ಭೂಮಿನ ಸಮಸ್ತ ಸಸ್ಯಕೋಟಿಗೆ, ಪ್ರಾಣಿ ಸಂಕುಲಕ್ಕೆ ಜೀವಶಕ್ತಿಯನ್ನು ತುಂಬುವ ದಿನಗಳಿವು.

ಪುರಾತನ ಕಾಲದ ನಮ್ಮ ಪ್ರಾಜ್ಞ ಚಿಂತಕರು ಸಂಕ್ರಾಂತಿಯನ್ನು ವರ್ಷದ ಮಹತ್ತರ ದಿನವೆಂದು ಗುರುತಿಸಿರುವುದು ನಿಜಕ್ಕೂ ಅತಿ ಸಮಂಜಸ ಎನಿಸುತ್ತಿದೆ. ಸಂಕ್ರಾಂತಿಯ ದಿನ ಎಳ್ಳು, ಬೆಲ್ಲ, ಕೊಬ್ಬರಿಯನ್ನು ತಿನ್ನುವಂತೆ ಎಲ್ಲರನ್ನೂ ಪ್ರಚೋದಿಸುವ ಆಚರಣೆಯನ್ನು ರೂಢಿಗೆ ತಂದಿರುವುದು ಸಹ ಬಹು ಅರ್ಥಪೂರ್ಣ. ನಮ್ಮ ನಾಡಿನ ಬಯಲು ಸೀಮೆಯ ಜನರಂತೂ, ಒಬ್ಬರ ಮನೆಗೆ ಇನ್ನೊಬ್ಬರು ಹೋಗಿ, ಪರಸ್ಪರ ಎಳ್ಳು ಬೆಲ್ಲವನ್ನು ಹಂಚಿಕೊಳ್ಳುವ ಸಡಗರಕ್ಕೆ ಸಾಟಿಯುಂಟೆ! ಇದರ ನಡುವೆ ಕಬ್ಬು, ಸಕ್ಕರೆ ಅಚ್ಚು, ಕುಸುರೆಳ್ಳು ಮೊದಲಾದ ವಿಶೇಷ ತಿನಿಸುಗಳನ್ನು ಸಹ ಒಬ್ಬರಿಗೆ ಒಬ್ಬರು ನೀಡಿ, ಈ ಸಡಗರಕ್ಕೆ ಮತ್ತಷ್ಟು ಮೆರುಗು ತುಂಬುತ್ತಾರೆ. ನಮ್ಮ ದೇಶದ ದಕ್ಷಿಣ ಭಾಗದವರು ಇಂದು ಪೊಂಗಲ್ ತಯಾರಿಸಲು ಬಹಳ ಪ್ರಾಮುಖ್ಯತೆ ಕೊಡುತ್ತಾರೆ. ಚಳಿಯ ದಿನಗಳು ಮುಗಿಯುವ ಈ ಸಮಯದಲ್ಲಿ ಪೊಂಗಲ್‌ನಂತಹ ಆರೋಗ್ಯ ಪೂರ್ಣ ತಿನಿಸನ್ನು ತಿನ್ನುವ ಮೂಲಕ, ದೇಹಕ್ಕೂ, ಮನಸ್ಸಿಗೂ ಹೊಸ ಶಕ್ತಿಯನ್ನು ತುಂಬು ಆ ಒಂದು ಪದ್ಧತಿಯಲ್ಲಿ ಮನುಕುಲದ ಆರೋಗ್ಯ ಕಾಪಾಡುವ ಕಾಳಜಿಯೂ ಅಡಗಿದೆ. ಆಂಧ್ರದಲ್ಲಿ ರಂಗೋಲಿಗಳನ್ನು ಬೀದಿ ತುಂಬಾ ತುಂಬಿ, ಇಡೀ ಪರಿಸರವನ್ನು ಚಿತ್ತಾರಮಯವನ್ನಾಗಿಸುವ ಪರಿಯಂತೂ ಬಹು ವಿಶೇಷ. ಮಕ್ಕಳು ಗಾಳಿಪಟ ಹಾರಿಸುವುದು, ವನಭೋಜನ, ಉಯ್ಯಾಲೆ ಆಟ, ಕೋಲಾಟ ಎಲ್ಲವೂ ಸಂಕ್ರಾಂತಿ ಆಚರಣೆಯ ಸಂಭ್ರಮದಲ್ಲಿ ಸೇರಿ ಹೋಗಿದೆ.



ಸಂಕ್ರಾಂತಿಯ ಆಚರಣೆಯಲ್ಲಿ ಅಡಕಗೊಂಡಿರುವ ಒಂದು ಆಚರಣೆಯು ಆಚರಿಸುವವರ ಜತೆಯಲ್ಲೇ, ನೋಡುಗರ ಮನದಲ್ಲೂ ಬಹಳಷ್ಟು ಉಲ್ಲಾಸ ತುಂಬುವುದಂತೂ ನಿಜ. ಅದೇ ಎಳ್ಳು ಬೀರುವುದು! ಪುಟಾಣಿಗಳು ಎಳ್ಳು ಬೆಲ್ಲವನ್ನು ತಮ್ಮ ಗೆಳೆಯ ಗೆಳತಿಯರಿಗೆ ಹಂಚಲು ಸಂಕ್ರಾಂತಿಯ ದಿನ ಸಂಜೆಯ ಸಮಯದಲ್ಲಿ ಬೀದಿ ಬೀದಿ ಸುತ್ತುವ ಪರಿಯನ್ನು ವರ್ಣಿಸಲು ಪದಗಳು ಸಾಲದು. ಬಣ್ಣ ಬಣ್ಣದ ಲಂಗ ಧರಿಸಿ, ಕೈಯಲ್ಲೊಂದು ಬಟ್ಟಲು ಹಿಡಿದು, ಪುಟು ಪುಟು ನಡಿಗೆ ನಡೆಯುತ್ತಾ ಅಕ್ಕ ಪಕ್ಕದ ಮನೆಗೆ ಹೋಗಿ, ಎಳ್ಳು ಬೆಲ್ಲ ನೀಡಿ, 'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡಿ' ಎನ್ನುತ್ತಾ ಸಂಭ್ರಮಿಸುವ ಸಂಕ್ರಾಂತಿಯು ಎಲ್ಲರ ಮನದಲ್ಲೂ ಸಂತಸದ, ಉಲ್ಲಾಸದ ಹೊಳೆಯನ್ನೇ ಹರಿಸುತ್ತದೆ. ಇದೇ ದಿನ ಪರಸ್ಪರ ವಿನಿಮಯ ಮಾಡಿಕೊಳ್ಳುವ ಸಕ್ಕರೆ ಅಚ್ಚು, ಕಬ್ಬು, ಜೀರಿಗೆ ಪೆಪ್ಪರ್ ಮಿಂಟ್‌ಗಳನ್ನು ತಿನ್ನುವುದೆಂದರೆ ಪುಟಾಣಿಗಳಿಗೂ, ದೊಡ್ಡವರಿಗೂ ಬಹು ಆಸ್ಥೆ. ಕೆಲವು ಊರುಗಳಲ್ಲಿ ಸಂಕ್ರಾಂತಿಯ ದಿನ ಕಬ್ಬಿನ ರಸವನ್ನು ಸಾರ್ವಜನಿಕವಾಗಿ ಹಂಚುವ ಸಂಪ್ರದಾಯವೂ ಉಂಟು.



ಅರ್ಥಪೂರ್ಣ ಸಂದೇಶ ಮತ್ತು ಆಚರಣೆ ಹೊಂದಿರುವ ಸಂಕ್ರಾಂತಿ ಹಬ್ಬವನ್ನು ಆಚರಿಸುವುದೆಂದರೆ ಅದೊಂದು ವಿಶೇಷ ಅನುಭೂತಿ. ಬನ್ನಿ, ಎಲ್ಲರಿಗೂ ಎಳ್ಳು ಬೆಲ್ಲ ಹಂಚೋಣ, ಅದನ್ನು ತಿಂದು ಒಳ್ಳೆಯ ಮಾತನಾಡೋಣ, ಮನದ ತುಂಬಾ ಒಳ್ಳೆಯದನ್ನೇ ಯೋಚಿಸೋಣ, ಹೊಸ ಹರ್ಷಕೆ ಅಣಿಯಾಗೋಣ.